C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

ಎಸ್ ಸಿ ಸಂಖ್ಯೆ: **32/2025**

ಪ್ರಾಸಾ. **03** ಚಾಸಾ. **04**

| | |
|---|---|
| ಸಾಕ್ಷಿದಾರರ ಹೆಸರು | ದೊಡ್ಡತಾಯಮ್ಮ |
| ಗಂಡನ ಹೆಸರು | ಚಿಕ್ಕವರದೇಗೌಡ |
| ವಯಸ್ಸು | 60 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ಹೊಸಕೊಪ್ಪಲು |

ಸಾಕ್ಷಿಯನ್ನು ದಿನಾಂಕ:15.06.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1 ನನ್ನ ಮೊಮ್ಮಗ, ಚಾಸಾ-2 ನನ್ನ ಮಗ, ಚಾಸಾ-3 ನನ್ನ ಗಂಡ. ನನ್ನ ಗಂಡ ಈಗ 5 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಚಾಸಾ-6 ನನ್ನ ಮೈದುನ, ಚಾಸಾ-5 ನನ್ನ ಓರಗಿತ್ತಿ. ನ್ಯಾಯಾಲಯದ ಮುಂದೆ ಇರುವ 1 ನೇ ಮತ್ತು 3 ನೇ ಆರೋಪಿತರು ನನ್ನ ಮೈದುನರು. 5 ನೇ ಆರೋಪಿ ನನ್ನ ಓರಗಿತ್ತಿ.

2. ಈಗ 7-8 ವರ್ಷಗಳ ಹಿಂದೆ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಬೆಳಗಿನ 9.00 ಗಂಟೆ ಸಮಯದಲ್ಲಿ ಕಣದ ಕಡೆಯಿಂದ ನಮ್ಮ ಮನೆಯ ಕಡೆಗೆ ಎತ್ತಿನಗಾಡಿಯಲ್ಲಿ ಭತ್ತ ತುಂಬಿಕೊಂಡು ಬರುತ್ತಿರುವಾಗ ನನ್ನ ಗಂಡ ಗಾಡಿ ನಡೆಸುತ್ತಿದ್ದನು, ಚಾಸಾ-1 ಗಾಡಿಯ ಹಿಂದೆ ಬರುತ್ತಿದ್ದನು, ಆಗ ಆರೋಪಿತರ ಮನೆಯ ಪಕ್ಕದಲ್ಲಿ ಬರುವಾಗ ಆರೋಪಿತರು ಇಲ್ಲಿ ಬರಬೇಡರಿ ಎಂದು ಚಾಸಾ-1 ಮತ್ತು ಚಾಸಾ-3 ರವರಿಗೆ ಕೊಲೆ ಬೆದರಿಕೆ ಹಾಕಿದರು. ಚಾಸಾ-1 ಅದನ್ನು

ಕೆಲಳಿದ್ದಕ್ಕೆ ಕೊಡಲಿಯಿಂದ 1ನೇ ಆರೋಪಿ ಚಾಸಾ-1 ರವರ ಅಂಗೈಗೆ ಹೊಡೆದು ಗಾಯ ಮಾಡಿದನು. 1 ಮತ್ತು 4ನೇ ಆರೋಪಿತರು ಚಾಸಾ-2 ಮತ್ತು ಚಾಸಾ-3 ರವರಿಗೆ ದೊಣ್ಣೆಗಳಿಂದ ಹೊಡೆದರು. 2 ಮತ್ತು 5ನೇ ಆರೋಪಿತರು ನನ್ನ ಮುಂದಲೆ ಹಿಡಿದುಕೊಂಡು ಕೆಳಗೆ ಬೀಳಿಸಿ ಹೊಡೆದರು ಮತ್ತು ಹೊಲಸು ಮಾತನಾಡಿದರು. ಆಗ ಯಾರೂ ಬರಲಿಲ್ಲ ಮತ್ತು ಯಾರೂ ಜಗಳ ಬಿಡಿಸಲಿಲ್ಲ, ಅವರವರೇ ಕಚ್ಚಾಡಿಕೊಂಡು ದೂರ ಹೋದರು. ಚಾಸಾ-1 ರಿಂದ ಚಾಸಾ-3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಚಾಸಾ-1 ಆಸ್ಪತ್ರೆಗೆ ಹೋಗಿ ಇಂಜೆಕ್ಷನ್ ಮಾಡಿಸಿಕೊಂಡು ಬಂದಿರುತ್ತಾನೆ.

3. ಕೊಡಲಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು.ಮ.1 ರ ಕೊಡಲಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ.

4. ಆರೋಪಿತರಿಗೂ ನಮಗೂ ಯಾವ ವಿಷಯಕ್ಕೆ ಮನಸ್ತಾಪ ಎಂದು ಗೊತ್ತಿಲ್ಲ ಆದರೆ ಭತ್ತ ತೆಗೆದುಕೊಂಡು ಬರುವಾಗ ಅವರು ಅಡ್ಡ ನಿಂತಿದ್ದರು.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿಸಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಘಟನೆಯ ಸಮಯದಲ್ಲಿ ಚಾಸಾ-5 ಮತ್ತು ಚಾಸಾ-6 ಬಂದು ಸಮಾಧಾನ ಪಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಕೆಳಗೆ ಬಿದ್ದಿದ್ದೆನು. ಮತ್ತೊಮ್ಮೆ ಈ ದಾರಿಯಲ್ಲಿ ಬಂದರೆ ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ನಾನು ಕೆಳಗೆ ಬಿದ್ದಿದ್ದೆ.

2. ಚಾಸಾ-5 ಮತ್ತು ಚಾಸಾ-6 ಜಗಳ ಬಿಸಿಡಿಸಿದ ಬಗ್ಗೆ ಮತ್ತು ಆರೋಪಿತರು ಕೊಲೆ ಬೆದರಿಕೆ ಹಾಕಿದ ಬಗ್ಗೆ ಈಗ ಓದಿ ಹೇಳಿದ ಪ್ರಕಾರ ನಾನು ಪೊಲೀಸರಿಗೆ

ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಸದರಿ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು.

(ವಿಶೇಷ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಚಾಸಾ-5 ರ ವಿಚಾರಣೆ ಮಾಡುವ ಸಲುವಾಗಿ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಬಿ.ಆರ್. ವಕೀಲರಿಂದಃ

2 ನೇ ಆರೋಪಿ ದೂರು ಕೊಟ್ಟ ಪ್ರಕರಣದಲ್ಲಿ ನಾನು ಆರೋಪಿಯಾಗಿದ್ದೇನೆ ಎನ್ನುವುದು ನಿಜ. ಈ ಕೇಸಿನ ಘಟನೆಯ ಬಗ್ಗೆ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ಈ ದಿನ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳನ್ನು ಈ ಮೊದಲು ನಾನು ಬೇರೆ ಎಲ್ಲಿಯೂ ಹೇಳಿಲ್ಲ. 4 ಮತ್ತು 5 ನೇ ಆರೋಪಿತರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ ಮತ್ತು ಇಲ್ಲಿಯೂ ಸಹ ಬರುತ್ತಾರೆ. ಸದರಿ ಘಟನೆ ನಡೆಯುವ ದಿನಕ್ಕಿಂತ ಮೊದಲೇ 4 ಮತ್ತು 5 ನೇ ಆರೋಪಿತರು ಊರಿಗೆ ಬಂದಿದ್ದರು. ಆರೋಪಿತರ ಮನೆ ಗೃಹ ಪ್ರವೇಶವಾಗಿ ಎಷ್ಟು ದಿನಗಳಾಗಿದೆ ಗೊತ್ತಿಲ್ಲ.

2. ಈ ಕೇಸಿನ ಘಟನೆ ನಡೆಯುವ ಮೊದಲೇ ಆರೋಪಿತರ ಮನೆಯ ಗೃಹಪ್ರವೇಶ ಆಗಿತ್ತು. ಆರೋಪಿತರ ಮನೆಯ ಗೃಹಪ್ರವೇಶಕ್ಕೆ ನಾನು ಹೋಗಿಲ್ಲ. ನಾವು ಮೊದಲೇ ಮುನಿಸಿಕೊಂಡಿದ್ದರಿಂದ ಆರೋಪಿತರ ಮನೆಯ ಗೃಹಪ್ರವೇಶಕ್ಕೆ

ನಾನು ಹೋಗಿಲ್ಲ. ಆರೋಪಿತರ ಮನೆಗೆ ಎಷ್ಟು ಗೇಟುಗಳಿವೆ ಗೊತ್ತಿಲ್ಲ. ಆರೋಪಿತರು ಮನೆಯ ಮುಂದೆ ಸಿಮೆಂಟ್ ಇಟ್ಟಿಗೆಗಳಿರುವುದು ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಕಾಲಿಗೆ ಗಾಯವಾಗಿತ್ತು ಎನ್ನುವುದು ನಿಜ. ಯಾರು ಜಗಳ ಬಿಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ಭತ್ತ ತುಂಬಿಕೊಂಡು ಬರಲು ಚಾಸಾ-1 ರಿಂದ 3 ರವರ ಜೊತೆ ನಾನೂ ಸಹ ಹೋಗಿದ್ದೆ. ಸದರಿ ದಿನ ಮಂಚಣ್ಣ ಎಂಬುವವರ ಎತ್ತುಗಳನ್ನು ತೆಗೆದುಕೊಂಡು ಭತ್ತ ತರುತ್ತಿದ್ದೆವು, ಗಾಡಿ ನಮ್ಮದೇ ಆಗಿತ್ತು. ಪೊಲೀಸರು ಭತ್ತವನ್ನು ನೋಡಿಲ್ಲ. ಸದರಿ ಗಾಡಿಯನ್ನು ಮತ್ತು ಎತ್ತುಗಳನ್ನೂ ಸಹ ಪೊಲೀಸರು ನೋಡಿಲ್ಲ. ಚಾಸಾ-1 ಯಶವಂತ್ ಏನು ದೂರು ಕೊಟ್ಟಿದ್ದಾನೆ ಎಂದು ನನಗೆ ಗೊತ್ತಿಲ್ಲ. ಚಾಸಾ-2 ಸುಜೇಯ ಏನು ದೂರು ಕೊಟ್ಟಿದ್ದಾಳೆ ಎಂದು ನನಗೆ ಗೊತ್ತಿಲ್ಲ.

3. 1 ನೇ ಆರೋಪಿಯ ಮನೆಯಲ್ಲಿ ಯಾರು ಯಾರು ವಾಸವಾಗಿದ್ದಾರೆ ನನಗೆ ಗೊತ್ತಿಲ್ಲ. ನಮ್ಮ ಮನೆ ಮತ್ತು ಆರೋಪಿತರ ಮಧ್ಯೆ ಮೂರು ಮನೆಗಳು ಇರುತ್ತವೆ. ಮನೆಯ ಯಾವ ದಿಕ್ಕಿಗೆ ರಸ್ತೆ ಇರುತ್ತದೆ ಎಂದು ನೋಡಿಲ್ಲ. ಸದರಿರಸ್ತೆಗಳನ್ನು ನಾನು ನೋಡಿರುತ್ತೇನೆ. ರಸ್ತೆಗಳನ್ನು ಮಾಡಿರುತ್ತಾರೆ ಆದರೆ ಯಾವಾಗ ಎಂದು ಹೇಳಲು ಆಗುವುದಿಲ್ಲ.

4. ನನ್ನ ಮಾವನ ಸ್ವತ್ತುಗಳು ಎಷ್ಟಿರುತ್ತವೆ ಎಂದು ನನಗೆ ಗೊತ್ತಿಲ್ಲ, ಭಾಗ ಆಗಿರುತ್ತದೆ, ಆದರೆ ಪತ್ರ ಇರುವುದಿಲ್ಲ. ಸದರಿ ಸ್ವತ್ತುಗಳು ನನ್ನ ಗಂಡನ ಖಾತೆಯಲ್ಲಿರುತ್ತವೆ ಎನ್ನುವುದು ಗೊತ್ತಿಲ್ಲ.

5. ಚಾಸಾ-1 ಯಶವಂತ್ ಬೆಂಗಳೂರಿನಲ್ಲಿ ವಾಸವಿರುತ್ತಾನೆ. ಚಾಸಾ-1 ಯಾವಾಗಲೂ ಆರೋಪಿತರ ಮನೆಗೆ ಹೋಗಿಲ್ಲ. ನಾನು, ನನ್ನ ಗಂಡ, ನನ್ನ ಮಗ ಮತ್ತು ಮೊಮ್ಮಗ ಏಕಾಏಕಿ ಆರೋಪಿತರ ಮನೆಗೆ ನುಗ್ಗಿದ್ದೆವು ಎನ್ನುವುದು ಸರಿಯಲ್ಲ. ಚಾಸಾ-1 1 ನೇ ಆರೋಪಿಯನ್ನು ಸಾಯಿಸುವುದಕ್ಕಾಗಿ ಇಟ್ಟಿಗೆಯಿಂದ ಹೊಡೆದಾಗ ಅದು 1 ನೇ ಆರೋಪಿಯ ಕಾಲಿನ ಮೇಲೆ ಬಿದ್ದು ಗಾಯವಾಯಿತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ 1 ನೇ ಆರೋಪಿ ನನ್ನ ಮೊಮ್ಮಗನಿಗೆ ಹೊಡೆಯಲು ಇಟ್ಟಿಗೆ ಎತ್ತಿಕೊಂಡಾಗ ಮತ್ತು 1 ನೇ ಆರೋಪಿಯ

ಹೆಂಡತಿ ಆತನನ್ನು ಹಿಂದಕ್ಕೆ ಎಳೆದಾಗ ಇಟ್ಟಿಗೆ 1 ನೇ ಆರೋಪಿಯ ಕಾಲಿನ ಮೇಲೆ ಬಿದ್ದು ಗಾಯವಾಗಿರುತ್ತದೆ. ಸದರಿ ಇಟ್ಟಿಗೆ ಎಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಇಟ್ಟಿಗೆಂದನ್ನು ಆ ಜಾಗಕ್ಕೆ ಎಲ್ಲಿಂದ ತಂದಿದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಚಾಸಾ-1 ರವರಿಗೆ ಇಟ್ಟಿಗೆಯಿಂದ ಹೊಡೆಯಲು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಆರೋಪಿತರು ಹಳೇ ಮನೆಯನ್ನು ಕೆಡವಿ ಅದೇ ಜಾಗದಲ್ಲಿ ಹೊಸ ಆರ್.ಸಿ.ಸಿ. ಮನೆ ಕಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಮನೆ ಕಟ್ಟಿದ ಜಾಗ ಯಾರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆ ಕಟ್ಟುವುದಕ್ಕೆ ಖಾತೆ ನಮ್ಮ ಹೆಸರಿನಲ್ಲಿದೆ ಎಂದು ನಾನು ಮತ್ತು ನನ್ನ ಗಂಡ ತಡೆದಿದ್ದೆವು ಎಂದರೆ ಸರಿಯಲ್ಲ. ನಂತರ ಪಂಚಾಯಿತಿ ನಡೆದು ಪಂಚಾಯಿತಿಯಿಂದ ಜಾಗ ಗ್ರಾಂಟ್ ಆದ ಮೇಲೆ ಆರೋಪಿತರು ಸದರಿ ಮನೆಯನ್ನು ಕಟ್ಟಿದರು ಎಂದರೆ ಸರಿಯಲ್ಲ.

7. ಮು.ಮ.1 ರ ಕೊಡಲಿಯನ್ನು ಪೊಲೀಸರಿಗೆ ಯಾರ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಮು.ಮ.1 ರ ಕೊಡಲಿಯನ್ನು ನಾನು ಈ ದಿನ ಮೊದಲನೇ ಬಾರಿ ನೋಡುತ್ತಿದ್ದೇನೆ ಎಂದರೆ ನಿಜ.

8. 2 ನೇ ಆರೋಪಿ ದೂರು ಕೊಟ್ಟಿದ್ದರಿಂದ ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಚಾಸಾ-1 ರವರಿಂದ ಸುಳ್ಳು ದೂರು ಕೊಡಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ದಿನ ನಾವು ಬಿಡಿಸಲು ಬಂದ 2 ನೇ ಆರೋಪಿಗೂ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.